**ಸಾಕ್ಷಿಯನ್ನು ದಿಃ 04.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 3 ನೇ ಎದುರುದಾರರ ಪರ ವಕೀಲರಿಂದಃ**

ನಾನು ದಿಃ 26.01.2025 ರಂದು ರಾತ್ರಿ 11.40 ಕ್ಕೆ ಕಾಳಿದಾಸ ರಸ್ತೆಯಲ್ಲಿ ನನ್ನ ಬೈಕ್ ನಲ್ಲಿ ಸೋಮನಾಥನಗರದಿಂದ ಕಾಳಿದಾಸ ರೋಡ್ ಗೆ ಹೋಗುತ್ತಿದ್ದೆ. ನನ್ನ ಬೈಕ್ ನಂ. ಕೆಎ-09-ಜೆಜೆ-3633 ಇರುತ್ತದೆ. ಸದರಿ ವಾಹನ ನನಗೆ ಸೇರಿದ್ದು. ನನಗೆ ಡಿ.ಎಲ್ ಇದೆ. ಈ ಬಗ್ಗೆ ದಾಖಲೆಗಳನ್ನು ವಕೀಲರಿಗೆ ಕೊಟ್ಟಿದ್ದೇನೆ. ಅಪಘಾತ ಐಶ್ವರ್ಯ ಪೆಟ್ರೋಲ್ ಬಂಕ್ ಸಿಗ್ನಲ್ ಬಳಿ ಹುಣಸೂರು ರಸ್ತೆಯಲ್ಲಿ ಆಗಿದೆ. ಆಂಬೂಲೆನ್ಸ್ ಕೆಎ-02-ಜಿ-3664 ಅಪಘಾತ ಪಡಿಸಿರುತ್ತದೆ. ಅದು ಮೈಸೂರು ಸಿಟಿ ಕಡೆಯಿಂದ ಬರುತ್ತಿತ್ತು. ನಾನು ಜಯಲಕ್ಷ್ಮೀ ಪುರಂ ರಸ್ತೆಯಿಂದ ಬರುತ್ತಿದ್ದೆ ಎಂದರೆ ಸರಿ. ಆಂಬೂಲೆನ್ಸ್ ಸದ್ದು ಮಾಡಿಕೊಂಡು ಬರುತ್ತಿತ್ತು ಎಂದರೆ ಸರಿಯಲ್ಲ. ಆ ಸಮಯದಲ್ಲೂ ಸಹ ಆಂಬೂಲೆನ್ಸ್ ಸದ್ದು ಮಾಡಿಕೊಂಡು ಹೋಗುತ್ತಿತ್ತು ಎಂದರೆ ಸರಿಯಲ್ಲ. ಅಪಘಾತ ಸಿಗ್ನಲ್ ನ ನಂತರ ಬದಿಯಲ್ಲಿ ಆಗಿದೆ ಎಂದರೆ ಸರಿ. ಸಿಗ್ನಲ್ ಇದ್ದರೂ ಸಹ ನಾನೇ ವೇಗವಾಗಿ ಚಲಾಯಿಸಿ ಅಪಘಾತ ಪಡಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಆಂಬೂಲೆನ್ಸ್ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ಬೈಕ್ ಗೆ ಬಲಬದಿಯಲ್ಲಿ ಜಖಂ ಆಗಿದೆ. ನನ್ನ ಬಲಗಾಲು ಆ್ಯಂಕಲ್ ಗೆ ಪೆಟ್ಟಾಗಿದೆ.

2. ಮೊದಲಿಗೆ ಬೃಂದಾವನ ಆಸ್ಪತ್ರೆಗೆ ಹೋಗಿ ಪ್ರಥಮ ಚಿಕಿತ್ಸೆ ಪಡೆದು ಅಲ್ಲಿಂದ ಕಾಮಾಕ್ಷಿ ಆಸ್ಪತ್ರೆಗೆ ಹೋಗಿದ್ದೇವೆ. ಕಾಮಾಕ್ಷಿ ಆಸ್ಪತ್ರೆಯಲ್ಲಿ ಒಂದು ದಿನ ಇದ್ದೆ. ಆನಂತರ ಬಿ.ಕೆ.ಜಿ ಆಸ್ಪತ್ರೆಗೆ ದಾಖಲಾಗಿ ಎರಡು ದಿನ ಚಿಕಿತ್ಸೆ ಪಡೆದಿದ್ದೇನೆ. ನನಗೆ ಶಸ್ತ್ರ ಚಿಕಿತ್ಸೆ ಮಾಡಿದ್ದಾರೆ. ವೈಧ್ಯರ ಹೆಸರು ಬಾಲಕೃಷ್ಣ. ನನಗೆ ರಾಡ್, ಪ್ಲೇಟ್ ಗಳನ್ನು ಅಳವಡಿಸಿದ್ದಾರೆ ಇನ್ನು ತೆಗೆದಿಲ್ಲ. ಪ್ರತಿ ತಿಂಗಳು ಚೆಕಪ್ ಗೆ ಹೋಗುತ್ತಿದ್ದೇನೆ. ಆ ಬಗ್ಗೆ ದಾಖಲೆ ನೀಡಿದ್ದೇನೆ. ಕೊನೆಯದಾಗಿ ಕಳೆದ ತಿಂಗಳು ವೈಧ್ಯರಲ್ಲಿಗೆ ಹೋಗಿದ್ದೇನೆ. ಇತ್ತೀಚಿಗೆ ಎಕ್ಸರೇ ತೆಗೆದಿದ್ದಾರೆ. ನನಗೆ ಆದ ಗಾಯಗಳು ವಾಸಿಯಾಗಿದೆ ಎಂದರೆ

ಸಾಕ್ಷಿಯು ಆಧಾರ ಇಲ್ಲದೇ ನಿಂತುಕೊಳ್ಳಲು ಆಗುವುದಿಲ್ಲ ಎನ್ನುತ್ತಾರೆ. ವೈಧ್ಯರು ಪ್ರಮಾಣಪತ್ರ ನೀಡಿದ್ದಾರೆ.

3. ಅಪಘಾತಕ್ಕೆ ಮೊದಲು ನಾನು ಎಂ.ಬಿ.ಎ ಓದಿಕೊಂಡು ಪೆಟ್ ಸ್ಟೇಷನ್ ಇಟ್ಟುಕೊಂಡು ಕೆಲಸ ಮಾಡುತ್ತಿದ್ದೆ. ಅದಕ್ಕೆ ಲೈಸೆನ್ಸ್ ಇದೆ. 35,000/- ರುಪಾಯಿ ತಿಂಗಳಿಗೆ ದುಡಿಯುತ್ತಿದ್ದ ಬಗ್ಗೆ ದಾಖಲೆ ನೀಡಿದ್ದೇನೆ. ಪೆಟ್ ಸ್ಟೇಷನ್ ಈಗ ನಡೆಸುತ್ತಿಲ್ಲ. ನನಗೆ ಕಾಲು ನೋವು ಆದ ಕಾರಣ ಆಗುತ್ತಿಲ್ಲ. ನಿಪಿ. 10 ರಲ್ಲಿ ಕ್ರಮ ಸಂಖ್ಯೆ 3 ರಲ್ಲಿ ಸ್ವರೂಪ್ ಎಂದು ಹೆಸರಿದೆ ಎಂದರೆ ಆತ ನನ್ನ ಸ್ನೇಹಿತ ಎನ್ನುತ್ತಾರೆ. ಬಿಲ್ ನಂ. 9 ರಲ್ಲಿ ಸುಜಿತ್ ಎಂದು ಇದೆ ಎಂದರೆ ಅವರು ನನ್ನ ಸ್ನೇಹಿತರು ಎನ್ನುತ್ತಾರೆ. ಸದರಿ ಬಿಲ್ಲುಗಳು ನನಗೆ ಸಂಬಂಧಿದವು ಅಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರಕ್ಕಾಗಿ ಸೃಷ್ಠಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ದಿನ ಆಸ್ಪತ್ರೆಗೆ ಹೋದ ಕಾರಣ ಪೋಲೀಸರಿಗೆ ದೂರು ನೀಡಲಾಗಲಿಲ್ಲ. ಅಪಘಾತ ನನ್ನ ನಿರ್ಲಕ್ಷ್ಯತನದಿಂದ ಆಗಿದೆ ಎಂದರೆ ಸರಿಯಲ್ಲ.

1 ಮತ್ತು 2 ನೇ ಎದುರುದಾರರು ಹಾಗೂ ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.